ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಸಮೀಕ್ಷೆ ಮಾಡುವ ಕಾರ್ಯಕ್ರಮ ತಡವಾಗಿದೆ. ತಡವಾಗಿರುವುದನ್ನು ನಾನು ಮೆಚ್ಚಲಿಕ್ಕೆ ಹೋಗಿಲ್ಲ. ಆದ್ಯತೆಯ ಮೇರೆಗೆ ಆ ಸಮೀಕ್ಷೆಯನ್ನು ಮಾಡಿ ಅವರಿಗೆ ಕಾರ್ಡ್‌ಗಳನ್ನು ಕೊಟ್ಟು ಅವರಿಗೆ ಪಡಿತರ ಮತ್ತು ಇತರೇ ಅವಶ್ಯಕತೆವಾದಂತಹ ವಸ್ತುಗಳನ್ನು ಕೊಡಿಸಲಿಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಭರವಸೆ ತಮಗೆ ಕೊಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್.—ನಿರ್ದಿಷ್ಟವಾಗಿ ಹೇಳಿ ಸಾಕಷ್ಟು ವರ್ಷದಿಂದ ಸಮೀಕ್ಷೆ ಬಗ್ಗೆ ಹೇಳುತ್ತಿದ್ದೀರಿ ಸಾಕಷ್ಟು ಜನ ಅರ್ಜಿ ಕೊಟ್ಟು ಮೇಲಿಂದ ಮೇಲೆ ನಮಗೆ ಕೇಳುತ್ತಿದ್ದಾರೆ ಎರಡು ಅಥವಾ ಮೂರು ತಿಂಗಳಲ್ಲಿ ಮುಗಿಸುತ್ತೇವೆ ಎಂದು ನಿರ್ದಿಷ್ಟವಾಗಿ ಆದರೂ ಭರವಸೆ ಕೊಡಿ. ನಮ್ಮ ಭಾಗದಲ್ಲಿ ಸೀಮೆ ಎಣ್ಣೆ ಸಿಗುವ ಹಾಗೆ ಇಲ್ಲ. ಆಕ್ಕಿ ಗೋಧಿ ಸಿಗುವ ಹಾಗೆ ಇಲ್ಲ. ಪದೇ ಪದೇ ನಾವು ಹೋದಂತಹ ಸಂದರ್ಭದಲ್ಲಿ ಜನರ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ನೋಡುತ್ತಿದ್ದೇವೆ ಆದ್ದರಿಂದ ಈ ಸಮೀಕ್ಷೆ ಕೆಲಸ ಯಾವಾಗ ಮುಗಿಸುತ್ತೀರೆಂದು ಹೇಳಬೇಕು.

೧೨-೦೦ ಪಿ.ಎಂ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಇಷ್ಟೇ ದಿವಸದಲ್ಲಿ ಮುಗಿಸುತ್ತೇವೆಂದು ಹೇಳುವುದು ಕಷ್ಟವಾದರೂ ಕೂಡ ಮಾನ್ಯ ಸದಸ್ಯರ ತೀವ್ರವಾದ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೀನಿ ಮಂತ್ರಿ ಅವರ ತೀವ್ರತೆಯನ್ನು ಕೂಡ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಸಮೀಕ್ಷೆ ಮುಗಿಸಿ. ಈ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಮುಖ್ಯಮಂತ್ರಿಯವರು ಪಟ್ಟಣ ಪ್ರದೇಶದಲ್ಲಿ ೭-೫-೯೦ರ ಒಂದು ಸುತ್ತೋಲೆ ಪ್ರಕಾರ ಸಮೀಕ್ಷೆ ಮಾಡುತ್ತೇವೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ೮-೧೧-೯೦ರ ಒಂದು ಸುತ್ತೋಲೆ ಪ್ರಕಾರ ಸಮೀಕ್ಷೆ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ಸಮೀಕ್ಷೆಗೆ ಕಾಲಮಿತಿ ಹಾಕಿಕೊಂಡಿದ್ದೀರಾ ? ಆದರೆಲ್ಲೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ೮-೧೧-೯೦ರ ಸುತ್ತೋಲೆ ಏನು ಇದೆ ಆ ಸುತ್ತೋಲೆ ಪ್ರಕಾರ ಎಷ್ಟು ದಿವಸದಲ್ಲಿ ಸಮೀಕ್ಷೆ ಮುಗಿಸಿ ಅರ್ಹರಾದವರಿಗೆ ಈ ಪಡಿತರ ಚೀಟಿಯನ್ನು ಕೊಡುವ ಉದ್ದೇಶವನ್ನು ತಾವು ಹೊಂದಿದ್ದೀರಿ ?

ಶ್ರೀ ಟಿ.ಎನ್ ನರಸಿಂಹಮೂರ್ತಿ —ನಿರ್ದಿಷ್ಟವಾಗಿ ಇಷ್ಟೆ ದಿವಸದಲ್ಲಿ, ಇಷ್ಟೇ ತಿಂಗಳಲ್ಲಿ ಮಾಡುತ್ತೇವೆಂದು ಹೇಳುವುದಕ್ಕೆ ಬಹಳ ಕಷ್ಟವಾಗುತ್ತದೆ.ಸಮೀಕ್ಷೆಯ ಕಾರ್ಯ ಮುಗಿಸಬೇಕೆನ್ನುವುದು ಇದೆ. ಮಾನ್ಯ ಸದಸ್ಯರು ಕೂಡ ಮಂತ್ರಿಗಳಾಗಿದ್ದಂತವರು. ನಾನು ನಿಮಗೆ ಭರವಸೆ ಕೊಟ್ಟುಮೇಲೆ ನೀವು ಹೇಳುವ ಸಲಹೆಗಳನ್ನು ಬಹಳ ಜವಾಬ್ದಾರಿಯಿಂದ ಗಮನಿಸಿಕೊಂಡಿದ್ದೇನೆ ತೀವ್ರತೆಯಿಂದ ಈ ಸಮೀಕ್ಷೆ ಕಾರ್ಯವನ್ನು ಮಾಡಿಸಿಕೊಡುತ್ತೇನಂಬ ಭರವಸೆಯನ್ನು ಮತ್ತೆ ನೀಡುತ್ತಿದ್ದೇನೆ.

ಹತ್ತು ಸಾವಿರ ರೂಪಾಯಿಗಳ ವರಮಾನವಿರುವವರಿಗೆ ಮಾತ್ರ ಪಡಿತರ ಚೀಟಿಗಳನ್ನು ನೀಡುವ ಬಗ್ಗೆ

೩೦೯ ಶ್ರೀ ರಾಮಲಿಂಗರೆಡ್ಡಿ (ಜಯನಗರ). ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹತ್ತು ಸಾವಿರ ರೂಪಾಯಿಗಳ ವರಮಾನ ಇರುವವರಿಗೆ ಮಾತ್ರ ಇನ್ನು ಮುಂದೆ ಪಡಿತರ ಚೀಟಿಗಳನ್ನು ನೀಡಲಾಗುವುದೆಂದು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಹಿಂದೆ ಪತ್ರಿಕಾ ಹೇಳಿಕೆ ನೀಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಈ ಹೇಳಿಕೆ ನೀಡಲು ಕಾರಣಗಳೇನು ಹಾಗೂ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಇಲ್ಲಾ

ಆ) ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗರೆಡ್ಡಿ.—ನಾನು ಈ ಪ್ರಶ್ನೆಯನ್ನು ಹಾಕಿದ್ದಾಗ ಆಹಾರ ಸಚಿವರು ನರಸಿಂಹಮೂರ್ತಿಯವರು ಆಗಿರಲಿಲ್ಲ. ಮಾನ್ಯ ಅಜೀಜ್ ಸೇಠ್‌ರವರು ಆಹಾರ ಸಚಿವರಾಗಿದ್ದರು. ೧೪-೯-೧೯೮೦ರಂದು ರೇಷನ್ ಕಾರ್ಡಿಗೆ ಮಾಸಿಕ ಮೂರು ಸಾವಿರ ಪರಮಾನ ಮಿತಿ ಎಂದು ಹಾಕಿ ಅದಕ್ಕಿಂತ ಹೆಚ್ಚಾಗಿರುವವರಿಗೆ ಪಡಿತರ ಚೀಟಿಯನ್ನು ನೀಡಲಾಗುವುದಿಲ್ಲವೆಂದು ಆಗಿನ ಆಹಾರ ಸಚಿವರು ಒಂದು ಹೇಳಿಕೆ ಕೊಟ್ಟಿದ್ದರು. ಹಾಗೂ ಸರ್ಕಾರ ಈ ಬಗ್ಗೆ ತೀರ್ಮಾನಿಸಿದೆ ಎಂದು ಹೇಳಿಕೆ ಕೊಟ್ಟಿದ್ದರು. ಈ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಅಧ್ಯಕ್ಷರು.—ನೀವು ಪ್ರಶ್ನೆ ಹಾಕಿದ್ದಾಗ ಅವರು ಇದ್ದರು. ಈಗ ಇವರು ಬಂದಿದ್ದಾರೆಂದು ನೀವೇ ಹೇಳಿದ್ದೀರಿ ಇನ್ನು ಉತ್ತರ ಏಕೆ ?

ಶ್ರೀ ರಾಮಲಿಂಗರೆಡ್ಡಿ.—ಇವರ ಬಗ್ಗೆ ಸರ್ಕಾರದ ಈಗಿನ ನಿಲುವು ಬೇಕು. ಹಿಂದೆ ಸಚಿವರಾಗಿದ್ದವರು ಮೂರು ಸಾವಿರ ರೂಪಾಯಿಗಿಂತ ಕಡಿಮೆ ಇರುವವರಿಗೆ ಮಾತ್ರ ಪಡಿತರ ಚೀಟಿಯನ್ನು ಕೊಡುತ್ತೇವೆಂದು ಹೇಳಿದ್ದರು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಂತ್ರಿಗಳ ಹೇಳಿಕೆಗಳು ಸರ್ಕಾರದ ನಿಯಮಗಳು ಆಗುವುದಿಲ್ಲ. ಅವರು ಪತ್ರಿಕಾ ಹೇಳಿಕೆಯನ್ನು ಯಾವ ಹಿನ್ನೆಲೆಯಲ್ಲಿ ಹೇಳಿದರು ಎಂಬುದು ನನಗೆ ಗೊತ್ತಿಲ್ಲ. ಆದರೆ ಸರ್ಕಾರದ ದಾಖಲಾತಿಯಲ್ಲಿ ಯಾವುದೇ ರೀತಿಯಿಂದ ಈಗಿನ ನೀತಿಯನ್ನು ಉಲ್ಲಂಘನೆ ಮಾಡಿಲ್ಲ.

ಪಾಂಡವಪುರದ ಆಸ್ಪತ್ರೆಯನ್ನು ಸ್ಥಳಾಂತರಗೊಳಿಸುವ ಬಗ್ಗೆ

೩೨೮. ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಪಾಂಡವಪುರ ತಾಲ್ಲೂಕಿನ ಪ್ರವಾಸಿ ಮಂದಿರದ ಬಳಿಗಡೆಯೇ ಆಸ್ಪತ್ರೆಯನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

(ಇ) ನೂತನ ಆಸ್ಪತ್ರೆಯು ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

(ಈ) ಈ ನೂತನ ಕಟ್ಟಡಕ್ಕೆ ತಗುಲಿದ ನಿರ್ಮಾಣದ ವೆಚ್ಚವೆಷ್ಟು ಮತ್ತು ಅದರ ಪ್ರಾರಂಭೋತ್ಸವ ಎಂದು ನಡೆಯುವುದು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು).—

(ಅ) ಬಂದಿದೆ

(ಆ) ಪಾಂಡವಪುರದ ಆಸ್ಪತ್ರೆಯನ್ನು ೫೦ ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ೧೯೮೪ನೇ ಸಾಲಿನಲ್ಲಿ ಮಂಜೂರಾತಿ ನೀಡಿ, ಕಟ್ಟಡದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

(ಇ) ಉದ್ಭವಿಸುವುದಿಲ್ಲ.

(ಈ) ಸೆಪ್ಟೆಂಬರ್ ೧೯೯೦ ಅಂತ್ಯದವರೆಗೆ ಕಟ್ಟಡಕ್ಕೆ ರೂ. ೫೨.೭೭ ಲಕ್ಷ ಖರ್ಚಾಗಿದ್ದು ನೀರು ಪೂರೈಕೆ, ವಿದ್ಯುತ್ತೀಕರಣ ಇತ್ಯಾದಿ ಕೆಲಸಗಳು ಬಾಕಿ ಇದ್ದು ಕೆಲಸ ಪ್ರಗತಿಯಲ್ಲಿದೆ. ಕೆಲಸ ಪೂರ್ಣವಾದ ನಂತರ ಪ್ರಾರಂಭೋತ್ಸವ ನಡೆಸಲಾಗುವುದು.

ಶ್ರೀ ಡಿ. ಹಲಗೇಗೌಡ.—ಇದರಲ್ಲಿ ಕಳೆದ ೫೦ ವರ್ಷಗಳಿಂದಲೂ ಕೂಡಾ ಪಾಂಡವಪುರದ ಸ್ವಾವಾಸಿ ಮಂದಿರವನ್ನು ಪ್ರವಾಸಿ ಮಂದಿರವನ್ನಾಗಿ ಮಾಡಿಕೊಂಡಿದ್ದಾರೆ. ಈಗ ಈ ಪ್ರವಾಸಿ ಮಂದಿರಕ್ಕಿಂತ ಸಂಸಜ್ಜಿತ ಆಲ್ಲದಿದ್ದರೂ ಕೂಡ ಸಂಪೂರ್ಣವಾಗಿ ಕಟ್ಟಿರತಕ್ಕ ಕಟ್ಟಡ ಅದರಲ್ಲೂ ದೊಡ್ಡ ಕಟ್ಟಡ. ವಿಶಾಲವಾದ ಕಟ್ಟಡವನ್ನು ಕಟ್ಟಿ ಒಂದು ವರ್ಷ ಆಗಿದ್ದರೂ ಕೂಡ ಕೇವಲ ವಿದ್ಯುತ್ ಪೂರೈಕೆ ನೀರಿನ ಸರಬರಾಜಿಗೋಸ್ಕರ ಪ್ರಾರಂಭ ಮಾಡದೆ ಒಂದು ವರ್ಷದಿಂದ ನಿಲ್ಲಿಸಿಕೊಂಡು ಬಂದಿರುವುದಕ್ಕೆ ಕಾರಣ ಏನು ? ಕಂಟ್ರಾಕ್ಟರುದಾರರಿಗೆ ಬಿಲ್ ಪಾವತಿ ಮಾಡಿಲ್ಲವೆನ್ನುವ ಕಾರಣಕ್ಕಾಗಿ ಕಟ್ಟಡವನ್ನು ಬಿಟ್ಟು ಕೊಡುವುದಿಲ್ಲ ಎನ್ನುವ ದೂರನ್ನು ಕೂಡ ಕೇಳಿದ್ದೇನೆ. ಇದನ್ನು ಎಷ್ಟು ಜಾಗ್ರತೆಯಾಗಿ ಯಾವಾಗ ನಿರ್ದಿಷ್ಟವಾಗಿ ಪ್ರವಾಸಿ ಮಂದಿರದಿಂದ ಆಸ್ಪತ್ರೆಯ ಕಟ್ಟಡಕ್ಕೆ ವರ್ಗಾಯಿಸಿ, ಪ್ರವಾಸಿ ಮಂದಿರವನ್ನು